ಈ ದಿನ ಕೆಲವರು ಸಗಣಿಯಲ್ಲಿ ಉಂಡೆಮಾಡಿ ಆ ಕಾಲದಲ್ಲಿ ಬೆಳೆದ ಪೈರುಗಳಲ್ಲಿ ಬಿಟ್ಟ ಹೂವುಗಳನ್ನು ಅದರಲ್ಲಿಟ್ಟು, ಮನೆಯ ಮುಂದಿನ ಹೊಸ್ತಿಲ ಅಕ್ಕಪಕ್ಕಗಳಲ್ಲಿ ಇಟ್ಟು ಪೂಜಿಸುತ್ತಾರೆ. ಗೋಪೂಜೆ ಇವತ್ತಿನ ವಿಶೇಷ. ಸಗಣಿಯಿಂದ ಬಲಿಚಕ್ರವರ್ತಿಯ ಕೋಟೆ ಕಟ್ಟಿ, ಮಧ್ಯೆ ಕಳಶವನ್ನಿಟ್ಟು ಪೂಜಿಸಿ, ಹಾಲಿನ ಕೋಡಿ ಹರಿಸುತ್ತಾರೆ. 'ಬಲೀಂದ್ರನ ರಾಜ್ಯ ಹೊನ್ನೋ ಹೊನ್ನು' ಎಂದು ಮನೆಯವರು ಸಂಭ್ರಮದಿಂದ ಹೇಳುತ್ತಾರೆ. ಅಂದರೆ ದೈತ್ಯನಾಶದಿಂದ ಆನಂದದ ಸಿರಿ, ಮದವನ್ನು ದಮನಿಸಿದಾಗ ಮನಸ್ಸಿಗೆ ಆಗುವ ಆನಂದ ಅವರ್ಣನೀಯ. ಮನಃಪೂರ್ವಕವಾಗಿ ದಾನ ಮಾಡಿದಾಗ ಆ ತ್ಯಾಗದಿಂದುಂಟಾಗುವ ಶಾಂತಿಯೇ ಅಪೂರ್ವ ಶಾಂತಿ. ಇವುಗಳೆಲ್ಲದರ ಸಂಕೇತವೇ ದೀಪಾವಳಿ! ಕೊನೆಯ ದಿನ ಅಕ್ಕತಂಗಿಯರ ದಿನ. ಸೋದರಿಯರ ಪ್ರೀತಿಯ ಸಂಭ್ರಮ. ಒಡಹುಟ್ಟಿದ ನಂಟು ಬಿಡಿಸಲಾಗದ ಅಂಟು. ಸೋದರಸೋದರಿಯರು ಬದುಕಿನ ಸುಖದುಃಖಗಳಲ್ಲಿ ಭಾಗಿಗಳಾಗುವವರು. ಅವರು ನಮ್ಮ ನೋವು–ನಲಿವುಗಳನ್ನು ಹಂಚಿಕೊಳ್ಳುವವರು. ಸೋದರಪ್ರೀತಿ ಎನ್ನುವುದು ನಿಷ್ಕಳಂಕ ಹಾಗೂ ನಿಷ್ಕಾಮ ವಾದದ್ದು. ಸೋದರಿ ಮದುವೆಯಾದರೂ ಯಾವಾಗಲೂ ತವರಿನ ಅಭಿವೃದ್ಧಿಯನ್ನು ಬಯಸುವವಳು. ಈ ಬಾಂಧವ್ಯ ನಂದಾದೀಪದಂತೆ ಎಂದಿಗೂ ಬೆಳಗುತ್ತಿರಲಿ ಎನ್ನುವುದರ ಸಂಕೇತವೇ ಈ ಹಬ್ಬ.

### ಬದುಕಿಗೆ ಶಿಕ್ಷಣ

ದೀಪಾವಳಿಯು ಸಾಮಾಜಿಕವಾಗಿ ದುಷ್ಟನಿಗ್ರಹದ ಹಾಗೂ ಅಂಧಕಾರದಿಂದ ಮುಕ್ತರಾಗಿ ಬೆಳಕಿನೆಡೆಗೆ ಸಾಗುವ ಹಬ್ಬ. ಕರ್ತವ್ಯನಿಷ್ಠೆ, ಅಹಂಕಾರದ ದಮನ, ತ್ಯಾಗ–ಸೇವೆ–ಆನಂದಗಳ ವಿಶೇಷತೆಗಳನ್ನು ಸ್ಮರಿಸುವ ಹಬ್ಬ. ಪ್ರತಿ ಹಬ್ಬದ ಹಿಂದೆಯೂ ಬದುಕಿಗೆ ಒಂದು ಶಿಕ್ಷಣವಿದ್ದೇ ಇರುತ್ತದೆ. ದೀಪಾವಳಿಯೂ ಕೂಡ ಹಾಗೆಯೇ. ದೀಪಗಳನ್ನು ಬೆಳಗುವ ಸಮಯ ಸಾಯಂಕಾಲ. ಸೂರ್ಯ (ಅರಿವು) ಅಸ್ತಮಿಸುತ್ತಿದ್ದಾಗ ಕವಿಯುವ ಮುಸುಕು ಮುಂಬರುವ ಕತ್ತಲೆಗೆ (ಮರೆವು) ಇದು ಸೂಚನೆಯಾಗುತ್ತದೆ. ಆಗ ಎಚ್ಚೆತ್ತುಕೊಳ್ಳಬೇಕೆಂಬ ವಿವೇಚನೆಯುಳ್ಳವರು ದೀಪವನ್ನು ಹಚ್ಚಿ ನಿರ್ಭಯರಾಗಿ ಕತ್ತಲನ್ನು ಎದುರಿಸಬಲ್ಲರು. ಮುಂಜಾಗ್ರತೆಯಿಂದ ಕಷ್ಟವನ್ನು ಎದುರಿಸಬಹುದೆಂಬ ಪಾಠ ಇಲ್ಲಿದೆ. **ದೀಪಜ್ಯೋತಿಃ ಪರಂಬ್ರಹ್ಮ ದೀಪರ್ಜ್ಯೋತಿರ್ಜನಾರ್ದನಃ । ದೀಪೋ ಹರತಿ ಪಾಪಾನಿ ಸಂಧ್ಯಾದೀಪ ನಮೋಽಸ್ತು ತೇ ॥** – ಪರಬ್ರಹ್ಮನ ಹಾಗೂ ವಿಷ್ಣುವಿನ ಪ್ರತಿರೂಪ ದೀಪ. ಅಂತಹ ದೀಪವು ನಮ್ಮ ಪಾಪಗಳನ್ನು ನಾಶಮಾಡುತ್ತದೆ. ಅದಕ್ಕೆ ನಮಸ್ಕಾರ ಎಂಬ ಅಭಿಪ್ರಾಯ ಮೇಲಿನ ಶ್ಲೋಕದ್ದು.

ದೀಪಗಳು ನಾನಾ ದ್ರವ್ಯಗಳಿಂದ ಮಾಡಲ್ಪಡುತ್ತವೆ. ಹಣತೆಗಳಲ್ಲಿ ಮಣ್ಣಿನ ಹಣತೆ ಶ್ರೇಷ್ಠ. ಭೂ ತಾಯಿಯ ಪೂಜೆ ಇದರ ಮೂಲಕ ನಡೆಯುತ್ತದೆ. ಇದರೊಳಗಿನ ಎಣ್ಣೆ ಬತ್ತದ ಪ್ರೀತಿಯ ಸಂಕೇತ. ಬತ್ತಿ ಕಾಯಕದ ಸಂಕೇತ. ಒಟ್ಟಿನಲ್ಲಿ ತಾನುರಿದು ಇತರರಿಗೂ ಬೆಳಕು ನೀಡುವ ದೀಪವು ನಿಷ್ಕಾಮ ಸೇವೆ, ತ್ಯಾಗ – ಇವುಗಳ ಸಂಕೇತ. ಹಣತೆ, ಎಣ್ಣೆ, ಬತ್ತಿ ಮಾತ್ರ ಇದ್ದರೆ ದೀಪ ಬೆಳಗೀತೆ? ಬೆಂಕಿ ಬೇಡವೇ? ಹಾಗೆಯೇ ಅರಿವಿನ ಬೆಳಕು ಕೂಡ. 'ನಾನು' ಎಂಬ ಸ್ವಾರ್ಥವನ್ನು ಸುಟ್ಟು ಭಸ್ಮ ಮಾಡುವ ಬೆಂಕಿಯ ಕಿಡಿ ತಾಗಿದಾಗ ಮಾತ್ರವೇ ಅರಿವಿನ ದೀಪ ಬೆಳಗುವುದು. ಕಣ್ಣಿನ ಆರೋಗ್ಯಕ್ಕೆ ಹಣತೆಯ ದೀಪ ಉತ್ತಮ. ಇದರಿಂದ ಪರಿಸರ ಮಾಲಿನ್ಯವಾಗದು. ಕತ್ತಲಿನ ದಿನಗಳಾದ ಕಾರ್ತಿಕ ಮಾಸದಲ್ಲಿ ಸಾಯಂಕಾಲ ದೀಪ ಹಚ್ಚುವುದಕ್ಕೆ ಅರ್ಥವುಂಟು. ದೀಪ ಬೆಳಗುವುದರ ಹಿನ್ನೆಲೆಯನ್ನು ಅರಿತು ಗೌರವಿಸಬೇಕು. ಇದೇ ದೀಪಾವಳಿಯ ಯುಕ್ತ ಆಚರಣೆ.

ಹಬ್ಬ ಎನ್ನುವುದು ಹರ್ಷದಾಯಕ. ಆದರೆ ಮತ್ತೊಬ್ಬರಿಗೆ ದುಃಖ ಉಂಟುಮಾಡುವಂತೆ ನಮ್ಮ ಸಡಗರವಿರಬಾರದಲ್ಲವೇ? ಸಾಧ್ಯವಾದರೆ ಅಂದು ದೀನ ದುಃಖಿಗಳ ತಾಪ ಕಳೆಯುವುದು, ಅವರ ಜೀವನವನ್ನು ಬೆಳಗುವುದೇ 'ದೀಪಾವಳಿ' ಏಕಾಗಬಾರದು? ಆಗ ಮಾತ್ರ 'ಹಬ್ಬ'ಕ್ಕೆ ಸಾರ್ಥಕತೆ. ಇದೇ ಲೇಸಾದ ಬದುಕು. ಸ್ವಾರ್ಥದ ಒಂಟಿತನ ಕಳೆಯಲಿ, ಹಬ್ಬದ ಸ್ನೇಹ, ಪ್ರೀತಿಯ ಅರಿವಿನ ದೀಪ ಬೆಳಗಲಿ! ಅಬ್ಬರವಡಗಲಿ, ಶಾಂತಿ ನೆಲೆಸಲಿ. ಇದೇ ನಮ್ಮ ಜೀವನ ಮಂತ್ರವಾಗಲಿ. ❐

**ಕರ್ನಾಟಕದ ಸುಪ್ರಸಿದ್ಧ ಕಲಾಕಾರರು ಮತ್ತು ಶ್ರೀರಾಮಕೃಷ್ಣರ ಭಕ್ತರೂ ಆಗಿದ್ದ ಸನ್ಮಾನ್ಯ ಶ್ರೀ ಪಿ. ಪುರುಷೋತ್ತಮ ಕಾರಂತರು ಇತ್ತೀಚೆಗೆ ಮಂಗಳೂರಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಹೈದರಾಬಾದ್, ಚೆನ್ನೈ, ಬೆಳಗಾವಿ ಮತ್ತು ಮಂಗಳೂರುಗಳಲ್ಲಿರುವ ರಾಮಕೃಷ್ಣ ಮಹಾಸಂಘದ ಕೇಂದ್ರಗಳಲ್ಲಿ ಅವರು ರಚಿಸಿರುವ ಅಪೂರ್ವ ಕಲಾಚಿತ್ರಗಳ ಪ್ರದರ್ಶನಗಳು ಸಾವಿರಾರು ಜನರನ್ನು ಆಕರ್ಷಿಸುತ್ತಿವೆ. 'ವಿವೇಕಪ್ರಭ' ಕ್ಕೆ ಆರಂಭದಿಂದಲೂ ಅನೇಕ ಚಿತ್ರಗಳನ್ನು, ಕಥೆಗಳನ್ನು ಮತ್ತು ಲೇಖನಗಳನ್ನು ಅವರು ಬರೆದುಕೊಟ್ಟಿದ್ದಾರೆ. ಸರಳ ಜೀವಿ ಮತ್ತು ಆಧ್ಯಾತ್ಮಿಕ ಸಾಧಕರಾಗಿದ್ದ ಇವರಿಗೆ 'ವಿವೇಕಪ್ರಭ' ವು ಈ ಮೂಲಕ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ. – ಸಂ.**

# ಗುರುವಿನೊಡನೆ ದೇವರಡಿಗೆ

ಧಾರಾವಾಹಿ

ಸ್ವಾಮಿ ಭೂತೇಶಾನಂದ



**ಪ್ರಶ್ನೆ: ಸ್ವಾಮೀಜಿ, ಶ್ರೀರಾಮಕೃಷ್ಣರನ್ನು 'ಅವತಾರವರಿಷ್ಠ' ಎನ್ನುತ್ತೇವೆ ಏಕೆ? ಹಾಗಾದರೆ ಶ್ರೀರಾಮ, ಶ್ರೀಕೃಷ್ಣ –ಅವರೆಲ್ಲ ಇವರಿಗಿಂತ ಕಡಿಮೆಯೆ?**

**ಸ್ವಾಮೀಜಿ:** ಶ್ರೀರಾಮಕೃಷ್ಣರು ನಮ್ಮವರಲ್ಲವೇ? ಆದುದರಿಂದ ಅವರು ವರಿಷ್ಠರೇ! (ನಗು) ವರಿಷ್ಠರೆಂದು ಹೇಳಲು ಕಾರಣ ಇದು: ಪುರಾತನ ಕಾಲದಲ್ಲಿ ಮನುಷ್ಯಜೀವನ ಬಹಳ ಸರಳ ಮತ್ತು ಸಹಜವಾಗಿತ್ತು. ಸಮಸ್ಯೆಗಳ ಜಟಿಲತೆ ಅಂದಿನವರಿಗೆ ಇರಲಿಲ್ಲ. ಕಾಲ ಉರುಳಿದ ಹಾಗೆ ಮನುಷ್ಯಜೀವನದ ಜಟಿಲತೆಗಳು ಬಿಗಡಾಯಿಸುತ್ತಿವೆ. ಈಗಿನ ಸಮಸ್ಯೆಗಳಿಗೆ ಪರಿಹಾರವೇ ಕಷ್ಟವಾಗಿದೆ. ಈ ಸಮಸ್ಯೆಗಳನ್ನು ಕೊನೆಗಾಣಿಸಲಿಕ್ಕಾಗಿ ಶ್ರೀರಾಮಕೃಷ್ಣರ ಆಂತರ್ಯದಿಂದ ಒಂದು ಅಪೂರ್ವಶಕ್ತಿ ಹೊರಹೊಮ್ಮಿದೆ. ಪ್ರಾಚೀನ ಕಾಲದಲ್ಲಿ ಅದರ ಆವಶ್ಯಕತೆ ಇರಲಿಲ್ಲ, ವರ್ತಮಾನ ಕಾಲದಲ್ಲಿ ಇದರ ಆವಶ್ಯಕತೆ ಬಹಳವಾಗಿ ಇದೆ. ಹೀಗೆ, ಅವತಾರಪುರುಷರು ತಾವು ಬಂದಾಗಲೆಲ್ಲ ತಮ್ಮ ಆಂತರ್ಯದಲ್ಲಿ ಇರುವ ಅನಂತಶಕ್ತಿಯಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರವನ್ನೇ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಅವರ ಒಳಗಿನ ಅನಂತಶಕ್ತಿಯನ್ನು ಪೂರ್ಣವಾಗಿ ಪ್ರಯೋಗಿಸಿ ಲಾಭವೇನೂ ಇಲ್ಲ. ಇದನ್ನು ಅರಿತುಕೊಳ್ಳುವುದು ಕೂಡ ಅಷ್ಟು ಸುಲಭವಲ್ಲ. ಈಗಲೂ ಶ್ರೀರಾಮಕೃಷ್ಣರು ತಮ್ಮ ಆಂತರ್ಯದ ಶಕ್ತಿಯಲ್ಲಿ ಎಷ್ಟು ಪ್ರಯೋಜನಕ್ಕೆ ಅವಶ್ಯವೋ, ಅಷ್ಟನ್ನು ಮಾತ್ರವೇ ಪ್ರಕಾಶಪಡಿಸಿದ್ದಾರೆ. ಈಗಿನ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರೀರಾಮಕೃಷ್ಣರ ಆಂತರ್ಯದಿಂದ ಅಸಾಮಾನ್ಯವಾದ ಶಕ್ತಿಯು ಪ್ರಕಾಶಗೊಂಡಿದೆ. ಈ ಅಸಾಧಾರಣ ಶಕ್ತಿಯನ್ನು ನೋಡಿಯೇ ಅವರನ್ನು 'ಅವತಾರವರಿಷ್ಠ' ಎಂದು ಕರೆಯಲಾಗಿದೆ. ಇದು ಒಂದು ಬಗೆಯ ವಿವರಣೆ.

**ಎರಡನೆಯ ವಿವರಣೆ ಹೀಗಿದೆ :** ಪ್ರಾಚೀನ ಕಾಲದಲ್ಲಿ ಜಗತ್ತು ಚಿಕ್ಕ ಚಿಕ್ಕ ಪ್ರದೇಶಗಳಾಗಿ ವಿಭಜನೆ ಹೊಂದಿತ್ತು. ಒಂದು ಪ್ರದೇಶದ ಜನರಿಗೆ ಇನ್ನೊಂದು ಪ್ರದೇಶದ ಜನರೊಂದಿಗೆ ಅಷ್ಟೊಂದು ಸಂಪರ್ಕವಿರುತ್ತಿರಲಿಲ್ಲ. ಯಾವುದೋ ಒಂದು ಸ್ಥಳದಲ್ಲಿ ಒಂದು ಸಮಸ್ಯೆ ಉದ್ಭವಿಸಿದರೆ ಆ ಪ್ರದೇಶದ ಜನರಷ್ಟೇ ಅದರಲ್ಲಿ ಭಾಗಿಯಾಗುತ್ತಿದ್ದರು. ಆದರೆ ವರ್ತಮಾನ ಕಾಲದಲ್ಲಿ ವೈಜ್ಞಾನಿಕ ಉನ್ನತಿಯಿಂದಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಜನ ಅಡೆತಡೆ ಇಲ್ಲದೆ ಪ್ರಯಾಣ ಮಾಡುತ್ತಿದ್ದಾರೆ. ಈಗ, ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಒಂದು ಮುಖ್ಯವಾದ ಘಟನೆ ನಡೆದರೆ ಅದು ಇಡೀ ಜಗತ್ತಿನ ಮೇಲೆಲ್ಲಾ ಪ್ರಭಾವ ಬೀರುತ್ತದೆ. ವರ್ತಮಾನ ಕಾಲದಲ್ಲಿ ಶ್ರೀರಾಮಕೃಷ್ಣರು ಅವತರಿಸಿ, ಇಡೀ ಜಗತ್ತಿಗೆ ಲಾಭವಾಗುವಂತೆ ಸಮಸ್ಯೆಗಳಿಗೆ ಪರಿಹಾರವಿತ್ತಿದ್ದಾರೆ. ಅವರ ಈ ವಿಶ್ವವ್ಯಾಪಕತೆ, ವಿಶಾಲತೆಯ ಹಿನ್ನೆಲೆಯಲ್ಲಿ ಕೂಡ, ಅವರನ್ನು 'ಅವತಾರವರಿಷ್ಠ' ಎಂದು ಕರೆಯಲಾಗಿದೆ.

ಪ್ರಾಚೀನ ಕಾಲದಲ್ಲಿ ಅವತಾರಪುರುಷರ ಕಾರ್ಯಕ್ಷೇತ್ರವು ಸೀಮಿತವಾಗಿತ್ತು. ಆದರೆ ಶ್ರೀರಾಮಕೃಷ್ಣರ ಕಾರ್ಯಕ್ಷೇತ್ರವು ಸೀಮಾತೀತ. ಈ ದೃಷ್ಟಿಯಿಂದಲೂ ಅವರನ್ನು 'ಅವತಾರವರಿಷ್ಠ'ರೆಂದು ಕರೆಯಬಹುದು. ಅವತಾರಪುರುಷರೊಳಗೆ ಒಬ್ಬ ಶ್ರೇಷ್ಠ, ಇನ್ನೊಬ್ಬ ನಿಕೃಷ್ಟವೆಂದು ಹೇಳುವ ಪ್ರಮೇಯವೇ ಇಲ್ಲ, ಭಗವಂತನು ಅಖಂಡಸ್ವರೂಪನಾಗಿದ್ದಾನೆ. ಆತನನ್ನು 'ಖಂಡ'ವನ್ನಾಗಿ (ವಿಭಾಗ) ಮಾಡಲು ಸಾಧ್ಯವಿಲ್ಲ. ಅದಲ್ಲದೆ ಪರಮಾತ್ಮನು ಸೀಮಾತೀತನಾಗಿದ್ದಾನೆ. ಪ್ರತಿ ಅವತಾರದ ಆಂತರ್ಯದಲ್ಲಿಯೂ ಅನಂತವಾದ ಶಕ್ತಿ ಹುದುಗಿದೆ. ಆದರೆ ಈ ಶಕ್ತಿಯು ಆಯಾ ಯುಗಕ್ಕೆ ಅನುಸಾರವಾಗಿ ಉಪಯೋಗವಾಗುತ್ತದೆ, ಅರ್ಥವಾಯಿತೆ?

**ಪ್ರಶ್ನೆ: ಸ್ವಾಮೀಜಿ, ಈ ಶಕ್ತಿಯ ಪ್ರಕಾಶದ ಬಗ್ಗೆ ಹೇಳುವುದಾದರೆ, ಅದು ಜಡಶಕ್ತಿಯಲ್ಲವಷ್ಟೇ, ಅದು ಆಧ್ಯಾತ್ಮಿಕ ಶಕ್ತಿ ತಾನೇ?**

**ಸ್ವಾಮೀಜಿ:** ಹೌದು, ಅದು ಜಡಶಕ್ತಿಯಲ್ಲ, ಆಧ್ಯಾತ್ಮಿಕಶಕ್ತಿ. ಹಿಂದಿನ ಅವತಾರಪುರುಷರು ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ಬಂದಿದ್ದರು. ಆದರೆ ಈ ಅವತಾರದಲ್ಲಿ ಇರುವುದು ಕೇವಲ 'ಪ್ರಣಾಮ ಅಸ್ತ್ರ'. ಗಿರೀಶ ಬಾಬು ಹೇಳುತ್ತಿದ್ದರು, "ಈ ಸಲ ಬೇರೆ